ಈ) ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕ್ರಮ ತೆಗೆದುಕೊಳ್ಳಲಾಗಿದೆ.

5383(6276) ಶ್ರೀ ಎಂ.ಟಿ.ಕೃಷ್ಣಪ್ಪ (ತುರುವೇಕೆರೆ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರಿನ ಗಂಗಾರಾಂ ಕಟ್ಟಡದ ಹಾನಿಯಿಂದ ನೊಂದವರಿಗೆ ಪರಿಹಾರ ನೀಡಲಾಗಿದೆಯೇ?

ಆ) ಪ್ರತಿಯೊಬ್ಬರಿಗೆ ಎಷ್ಟು ಹಣ ನೀಡಲಾಗಿದೆ?

ಇ) ಈ ಹಣ ಕೋರ್ಟ್ ಆದೇಶದಂತೆ ಸರ್ಕಾರದಿಂದ ನೀಡಲಾಗಿದೆಯೇ ಅಥವಾ ಕಟ್ಟಡದ ಮಾಲೀಕರಿಂದ ನೀಡಲಾಗಿದೆಯೇ?

ಈ) ಇನ್ನು ಎಷ್ಟು ಜನಕ್ಕೆ ಪರಿಹಾರ ಬಾಕಿ ಇದೆ?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) :

ಅ) ಹೌದು

ಆ) ಮರಣ ಹೊಂದಿದ ವ್ಯಕ್ತಿಗಳ ವಾರಸುದಾರರಿಗೆ ರೂ. 2000/– ರಂತೆ ಮತ್ತು ಗಾಯಗೊಂಡವರಿಗೆ ರೂ. 500/– ರಂತೆ ಹಾಗೂ ಮುಖ್ಯಮಂತ್ರಿಯವರ ಪರಿಹಾರ ನಿಧಿಯಿಂದ ಮೃತ ಹೊಂದಿದ ವಾರಸುದಾರರಿಗೆ ರೂ. 5000/– ಹಾಗೂ ಪ್ರಧಾನ ಮಂತ್ರಿಯವರ ನಿಧಿಯಿಂದ ರೂ. 2000/–ಗಳ ಪರಿಹಾರವನ್ನು ನೀಡಲಾಗಿದೆ.

ಇ) ಸಿವಿಲ್ ಅಪೀಲು ಸಂ.6720/98 ಮತ್ತು 6721/98 ರಡಿ ಶ್ರೀ ಪಿ.ಎ. ಕುಲಕರ್ಣಿ ಮತ್ತು ಇತರರ ಕೋರಿಕೆಯನ್ನು ಹಾಗೂ ಸುಪ್ರೀಂ ಕೋರ್ಟ್ ಆದೇಶವನ್ನು ಸರ್ಕಾರವು ಪರಿಶೀಲಿಸಿ, ರೂ. 16,17,000/– ಮೊತ್ತವನ್ನು ಗಂಗಾರಾಂ ಕಟ್ಟಡದಲ್ಲಿ ಮೃತರಾದವರಿಗೆ ಎಕ್ಸ್‌ಗ್ರೇಷಿಯಾವನ್ನು ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ನೀಡಲು ನಿರ್ದೇಶಿಸಲಾಗಿತ್ತು. ಅದರಂತೆ, ದಿನಾಂಕ 7.8.04 ರಂದು ಉಪ ಆಯುಕ್ತರು (ಕಂದಾಯ ಮತ್ತು ಮುಖ್ಯ ಲೆಕ್ಕಾಧಿಕಾರಿಗಳ ಹೆಸರಿನಲ್ಲಿ ಜಂಟಿ ಖಾತೆಯನ್ನು ತೆರೆದು ರೂ. 16,17,000/– ಗಳನ್ನು ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಚ ನ್ಯಾಯಾಲಯ ಇಲ್ಲಿ ದಿನಾಂಕ 10.9.2004 ರಂದು ಠೇವಣಿ ಇಡಲಾಗಿದೆ.

ಈ) ಸಂತ್ರಸ್ತರ ವಾರಸುದಾರರು ಮತ್ತು ಮೃತರ ವಾರಸುದಾರರ ಪ್ರಸ್ತುತ ವಿಳಾಸಗಳು ಲಭ್ಯವಿಲ್ಲದ ಕಾರಣ, ಪತ್ರಿಕಾ ಪ್ರಕಟಣೆ ಹೊರಡಿಸಿ, ವಿವರಗಳನ್ನು ಸಂಗ್ರಹಿಸಲು ಕ್ರಮ ಕೈಗೊಳ್ಳಲಾಗಿದೆ. ಫಲಾನುಭವಿಗಳ ವಿವರಗಳನ್ನು ಸಂಗ್ರಹಿಸಿದ ನಂತರ ಕರ್ನಾಟಕ ರಿಜಿಸ್ಟ್ರಾರ್ ಜನರಲ್ ರವರ ಮೂಲಕ ಪರಿಹಾರವನ್ನು ವಿತರಿಸಲಾಗುವುದು.

5385(6279) ಶ್ರೀ ಕೃಷ್ಣಪ್ಪ ಎಂ.ಟಿ (ತುರುವೇಕೆರೆ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬಿ.ಡಿ.ಎ. ಮೇಲು ಸೇತುವೆ ಕೆಲಸ ಪೂರ್ಣಗೊಳಿಸಲು ಎಷ್ಟು ಹಣವನ್ನು ಲಾಭಾಂಶವಾಗಿ ಗುತ್ತಿಗೆದಾರರಿಗೆ ನೀಡಲು ಉದ್ದೇಶಿಸಲಾಗಿದೆ;

ಆ) ಈ ಸರ್ಕಾರಿ ಸ್ವಾಮ್ಯದ ಗುತ್ತಿಗೆದಾರರಿಗೆ ನೀಡಿದ ಸೌಲಭ್ಯ ರಾಜ್ಯದ ಇತರ ಗುತ್ತಿಗೆದಾರರಿಗೂ ಹಾಗೂ ಇತರ ಇಲಾಖೆಗಳಿಗೂ ಅನ್ವಯವಾಗುವುದೇ;

ಇ) ಇದನ್ನು ರಾಜ್ಯ ಉಚ್ಚ ನ್ಯಾಯಾಲಯ ಒಪ್ಪಿಬೆಯೇ?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) :

ಅ) ಲಾಭಾಂಶವನ್ನು ಪರಿಗಣಿಸುವುದಿಲ್ಲ.

ಆ) ಪ್ರಶ್ನೆ ಸಂಖ್ಯೆ: (ಅ)ಗೆ ನೀಡಿರುವ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ರಾಜ್ಯ ಉಚ್ಚ ನ್ಯಾಯಾಲಯವು ಮೂಲ ಗುತ್ತಿಗೆದಾರರಿಂದಲೇ ಉಳಿದ ಕಾಮಗಾರಿಯನ್ನು ಪೂರ್ಣಗೊಳಿಸುವಂತೆ ಆದೇಶ ನೀಡಿರುತ್ತದೆ ಮತ್ತು ಲಾಭಾಂಶದ ಬಗ್ಗೆ ಏನು ಪ್ರಸ್ತಾಪ ಇರುವುದಿಲ್ಲ.

5386(6280) ಶ್ರೀ ಕುಮಾರಸ್ವಾಮಿ ಹೆಚ್.ಕೆ. (ಬೇಲೂರು) : ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹಾಸನ ಜಿಲ್ಲೆ ಬೇಲೂರು ಪಟ್ಟಣಕ್ಕೆ ಬಸ್ ಡಿಪೋ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಯಾವಾಗ ಮಂಜೂರು ಮಾಡಲಾಗುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ) ಹೌದು.

ಆ) ಬೇಲೂರು ತಾಲ್ಲೂಕಿನ ಸಾರಿಗೆ ಅವಶ್ಯಕತೆಗಳನ್ನು ಬೇಲೂರು ತಾಲ್ಲೂಕಿನ ಸುತ್ತಮುತ್ತ ಇರುವ ಚಿಕ್ಕಮಗಳೂರು, ಅರಸೀಕೆರೆ, ಸಕಲೇಶಪುರ, ಕಡೂರು, ಹಾಸನ ಘಟಕಗಳಿಂದ ಪೂರೈಸಲಾಗುತ್ತಿದೆ. ಬೇಲೂರಿನಿಂದ 35 ಕಿ.ಮೀ. ಅಂತರದಲ್ಲಿ ಮೂಡಿಗೆರೆ ಪಟ್ಟಣದಲ್ಲಿ ನೂತನ ಬಸ್ ಘಟಕವು ಸದ್ಯದಲ್ಲಿ ಪ್ರಾರಂಭಗೊಳ್ಳುವ ಹಂತದಲ್ಲಿರುತ್ತದೆ. ಪ್ರಸ್ತುತ ಬೇಲೂರು ತಾಲ್ಲೂಕಿನ ಪ್ರಯಾಣಿಕರಿಗೆ ಮೇಲ್ಕಂಡ ಬಸ್ ಘಟಕಗಳಿಂದ ಸಾರಿಗೆ ಸೌಕರ್ಯಗಳನ್ನು ಒದಗಿಸಲಾಗುತ್ತಿರುತ್ತದೆ. ಈ ಹಿನ್ನೆಲೆಯಲ್ಲಿ, ಸದ್ಯಕ್ಕೆ ಬೇಲೂರಿನಲ್ಲಿ ಬಸ್ ಘಟಕ ಸ್ಥಾಪಿಸುವ ಅವಶ್ಯಕತೆ ಕಂಡು ಬರುವುದಿಲ್ಲ.

5387(6281) ಶ್ರೀ ಕುಮಾರಸ್ವಾಮಿ ಹೆಚ್.ಕೆ. (ಬೇಲೂರು) : ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹಾಸನ ಜಿಲ್ಲೆ ಬೇಲೂರು ತಾಲ್ಲೂಕು ಹೊನ್ನೇಮನೆ ಗ್ರಾಮದ ಬಳಿ ವಾಟೆಹೊಳೆ ಜಲಾಶಯದ ಹಿನ್ನೀರಿಗೆ ಅಡ್ಡಲಾಗಿ ಸೇತುವೆ ನಿರ್ಮಿಸುತ್ತಿರುವುದು ನಿಜವೆ:

ಆ) ಹಾಗಿದ್ದಲ್ಲಿ, ಕಾಮಗಾರಿ ನಿಂತು ಮೂರು ವರ್ಷಗಳಾದರೂ ಕೆಲಸ ಮುಂದುವರೆಸದಿರಲು ಕಾರಣಗಳೇನು?

ಇ) ಕಾಮಗಾರಿಯನ್ನು ಇಲಾಖೆ ಮುಖಾಂತರ ಪಡೆದು ಪೂರ್ಣಗೊಳಿಸಲಾಗುವುದೇ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ) ನಿರ್ಮಿಸಲಾಗುತ್ತಿದೆ.

ಆ) ಮೂಲ ಟೆಂಡರ್ ಗುತ್ತಿಗೆ ರದ್ದು ಪಡಿಸಿದ ನಂತರ ಉಳಿಕೆ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಯಲ್ಲಿದೆ.

ಇ) ನಿಯಮಾನುಸಾರ ಟೆಂಡರ್ ಮೂಲಕ ಕಾಮಗಾರಿಯನ್ನು ಕೈಗೆತ್ತಿಗೊಂಡು ಪೂರ್ಣ ಗೊಳಿಸಲಾಗುವುದು.